File No. ENERGY/292/PSR/2020-REFORMS-ENERGY SECRETARIAT

# ಕರ್ನಾಟಕ ಸರ್ಕಾರ

ಸಂಖ್ಯೆ: ಎನರ್ಜಿ 292 ಪಿಎಸ್‌ಆರ್ 2020
ಲಗತ್ತು:

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.08.2020

ಇಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

ಗೆ,
ವ್ಯವಸ್ಥಾಪಕ ನಿರ್ದೇಶಕರು,
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ, ಗುಲ್ಬರ್ಗ.
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.
ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ, ಹುಕ್ಕೇರಿ.
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

1760
04/09/2020

3167
25/08/2020

1639
31/8/2020

ಮಾನ್ಯರೆ,

ವಿಷಯ: SCSP /TSP ಅಡಿಯಲ್ಲಿ ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ ನಿಯಮಗಳಂತೆ ಫಲಾನುಭವಿಗಳ ಆಯ್ಕೆ ಮಾಡುವ ಕುರಿತು.

ಉಲ್ಲೇಖ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆರವರ ಅ.ಸ.ಪತ್ರ ಸಂಖ್ಯೆ: ಸಕಇ/SCSP/TSP/ಸಿ.ಆರ್.–05/2020–21 ದಿನಾಂಕ 23.06.2020.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಮಾಜ ಕಲ್ಯಾಣ ಇಲಾಖೆರವರ ಉಲ್ಲೇಖಿತ ದಿನಾಂಕ; 23.06.2020 ರ ಅ.ಸ.ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಅ. ಸ ಪತ್ರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 28.05.2020ರಂದು ನಡೆದ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ SCSP /TSP ಅಡಿಯಲ್ಲಿ ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ ನಿಯಮಗಳಂತೆ (ನಿಯಮ 9(3)) ಆಯ್ಕೆ ಸಮಿತಿಗಳು ಪಾರದರ್ಶಕವಾಗಿ ವೈಯ್ಯಕ್ತಿಕ ಫಲಾನುಭವಿಗಳನ್ನು ಆಯ್ಕೆ ಮಾಡಲು ಹಾಗು ಎಲ್ಲಾ ಇಲಾಖೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನ ಸಂಖ್ಯೆಯ ಆಧಾರದ ಮೇಲೆ ಜಿಲ್ಲೆ ಮತ್ತು ವಿಧಾನ ಸಭಾ ಕ್ಷೇತ್ರಗಳಿಗೆ ಗುರಿ ನಿಗಧಿ ಪಡಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸೂಚಿಸಲಾಗಿರುವುದಾಗಿ ತಿಳಿಸಿದೆ.

AGM TI
AGM TI

ಆದುದರಿಂದ, ಕರ್ನಾಟಕ ಅನುಸೂಚಿತ ಜಾತಿ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ ನಿಯಮಗಳ ನಿಯಮ 9(3) ರಲ್ಲಿ ಸೂಚಿಸಿರುವ ಕ್ರಮಗಳಂತೆ (ನಿಯಮ 9(3)ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ) ಕಾರ್ಯಕ್ರಮ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ

N. mangalagowri 13/8/2020

(ಎನ್.ಮಂಗಳಗೌರಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಮೆಮೋ: ಪ್ರವ್ಯ(ತಾ)/ಉಪ್ರವ್ಯ(ತಾ)/ಸಪ್ರವ್ಯ(ತಾ)-1/2020-21/ cys-725 ದಿನಾಂಕ: -7 SEP 2020

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಮುಖ್ಯ ಆರ್ಥಿಕ ಅಧಿಕಾರಿಗಳು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
2. ಮುಖ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಲಯ, ಚಾ.ವಿ.ಸ.ನಿ.ನಿ., ಮೈಸೂರು/ಹಾಸನ.
3. ಪ್ರಧಾನ ವ್ಯವಸ್ಥಾಪಕರು (ಯೋಜನೆ) ಆಡಳಿತ ಕಛೇರಿ, ಚಾವಿಸನಿನಿ, ಮೈಸೂರು
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಚಾವಿಸನಿನಿ
5. ಉಪ ಪ್ರಧಾನ ವ್ಯವಸ್ಥಾಪಕರು ಡಿಎಸ್‌ಎಮ್, ಆಡಳಿತ ಕಛೇರಿ, ಚಾವಿಸನಿನಿ, ಮೈಸೂರು
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾವಿಸನಿನಿ
7. ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐಎಸ್), ನಿಗಮ ಕಛೇರಿ, ಚಾವಿಸನಿನಿ, ಮೈಸೂರು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8. ಆ.ಸ, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ) ಇವರ ಗಮನಕ್ಕೆ.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),

ಚಾ.ವಿ.ಸ.ನಿ.ನಿ., ಮೈಸೂರು.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| | | |
|---|---|---|
| ಭಾಗ–153 | ಬೆಂಗಳೂರು, ಗುರುವಾರ, ಮೇ 24, 2018 (ಜ್ಯೇಷ್ಠ 3, ಶಕ ವರ್ಷ 1940) | ನಂ.21 |
| Part-153 | Bengaluru, Thursday, May 24, 2018 (Jyeishta 3, Shaka Varsha 1940) | No.21 |


## ಸಮಾಜ ಕಲ್ಯಾಣ ಸಚಿವಾಲಯ

## ಅಧಿಸೂಚನೆ

**ಸಂ. ಎಸ್‌ಡಬ್ಲ್ಯೂಡಿ 167 ಎಸ್‌ಎಲ್‌ಪಿ 2017 (ಪಿ1), ಬೆಂಗಳೂರು,**
**ದಿನಾಂಕ: 08.11.2017**

### ಕರ್ನಾಟಕ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು 2017

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ರ (2013ರ ಕರ್ನಾಟಕ ಅಧಿನಿಯಮ 65, ಮೂಲ ಅಧಿನಿಯಮ ಮತ್ತು ತಿದ್ದುಪಡಿ ಅಧಿನಿಯಮ, 2017)ರ 27ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರೂಪಿಸಲು ಉದ್ದೇಶಿಸಿರುವ ಕರ್ನಾಟಕ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಹಾಗೂ ಬುಡಕಟ್ಟು ಉಪ–ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಹಾಗೂ ಬಳಕೆ) ನಿಯಮಗಳು, 2017ರ ಕರಡನ್ನು, ಸರ್ಕಾರಿ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ, ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಆಹ್ವಾನಿಸಿ, ಅಧಿಸೂಚನೆ ಸಂ. ಎಸ್‌ಡಬ್ಲ್ಯೂಡಿ 167 ಎಸ್‌ಎಲ್‌ಪಿ 2017 (ಪಿ1), ಬೆಂಗಳೂರು, ದಿನಾಂಕ: 02.08.2017 ರಲ್ಲಿ ಪ್ರಕಟಿಸಲಾಗಿದೆ.

ಮತ್ತು ರಾಜ್ಯಪತ್ರವನ್ನು 02.08.2017 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸ್ವೀಕರಿಸದೆ ಇರುವುದರಿಂದ;

ಈಗ, ಆದ್ದರಿಂದ ಕರ್ನಾಟಕ ಅನುಸೂಚಿತ ಜಾತಿಗಳ ಉಪ–ಹಂಚಿಕೆ ಹಾಗೂ ಬುಡಕಟ್ಟು ಉಪ–ಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಹಾಗೂ ಬಳಕೆ) ಅಧಿನಿಯಮ 2013 (2013ರ ಕರ್ನಾಟಕ ಅಧಿನಿಯಮ 65–ಮೂಲ ಅಧಿನಿಯಮ ಮತ್ತು ತಿದ್ದುಪಡಿ ಅಧಿನಿಯಮ, 2017)ರ 27ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

9. **15 ಮತ್ತು 17ನೇ ಪ್ರಕರಣದ ಮೇರೆಗೆ ಇಲಾಖೆಗಳು, ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ-ಹಂಚಿಕೆಯಲ್ಲಿ ಸೇರಿಸಬೇಕಾದ ಯೋಜನೆಗಳನ್ನು ಗುರುತಿಸುವುದು.**

(1) ಪ್ರತಿಯೊಂದು ಇಲಾಖೆಯು, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ನೇರವಾಗಿ ಪ್ರಯೋಜನವಾಗುವಂಥ ಯೋಜನೆಗಳೂ ಒಳಗೊಂಡಂತೆ ಯೋಜನೆಗಳನ್ನು ಗುರುತಿಸತಕ್ಕದ್ದು.

(2) ಮೇಲಿನ (1)ನೇ ಉಪ-ನಿಯಮದ ಮೇರೆಗೆ ಯೋಜನೆಗಳನ್ನು ಗುರುತಿಸುವಾಗ ಪ್ರತಿಯೊಂದು ಇಲಾಖೆಯು ಈ ಮುಂದಿನವುಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು:

(ಎ) ಅಭಿವೃದ್ಧಿ ಕಾರ್ಯಗಳಲ್ಲಿ ಗುರುತಿಸಲಾದ ಅಂತರಗಳನ್ನು ತಗ್ಗಿಸುವ ಉದ್ದೇಶದಿಂದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳು, ವ್ಯಕ್ತಿಗಳು, ಕುಟುಂಬಗಳು, ವಾಸಸ್ಥಳಗಳು, ಸಾಮಾಜಿಕ ಗುಂಪುಗಳು ಹಾಗೂ ಸಂಸ್ಥೆಗಳಿಗೆ ಮಾತ್ರ ನೇರ ಮತ್ತು ಪ್ರಮಾಣನುಗತವಾದ ಪ್ರಯೋಜನಗಳನ್ನು ಒದಗಿಸಬೇಕು.

(ಬಿ) ವೃತ್ತಿಪರ ಮತ್ತು ಇತರ ಉನ್ನತ ಶಿಕ್ಷಣ/ ತಾಂತ್ರಿಕ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಮತ್ತು ಸ್ಪರ್ಧಾತ್ಮಕ ಆಯ್ಕೆಗಳಿಗಾಗಿ ಉದ್ಯೋಗಕಾಗಿ, ಕೌಶಲ್ಯಾಭಿವೃದ್ಧಿಗಾಗಿ ಗುಣಮಟ್ಟದ ಶಿಕ್ಷಣ, ಗುಣಮಟ್ಟದ ವಸತಿ ಶಾಲೆಗಳು, ಉನ್ನತ ಶಿಕ್ಷಣ ಪರಿಹಾರಾತ್ಮಕ ಮತ್ತು ವಿಶೇಷ ತರಬೇತಿ ನೀಡಲು ಆದ್ಯತೆ ನೀಡುವುದು.

(ಸಿ) ಆರೋಗ್ಯ ವಿಮೆ ಹಾಗೂ ಅರಿವು ಮೂಡಿಸುವುದು ಒಳಗೊಂಡಂತೆ ಆರೋಗ್ಯ ಪಾಲನೆ ಮತ್ತು ಚಿಕಿತ್ಸೆ.

(ಡಿ) ಸಮುದಾಯ ನೈರ್ಮಲ್ಯ ಒಳಗೊಂಡಂತೆ ವಸತಿ ಹಾಗೂ ನೈರ್ಮಲೀಕರಣ.

(ಇ) ಭೂರಹಿತರಿಗೆ ಭೂಮಿ, ನೀರಾವರಿ ಸೌಲಭ್ಯ, ವಾಣಿಜ್ಯೋದ್ಯಮದ ಅಭಿವೃದ್ಧಿ ಮೊದಲಾದವು ಒಳಗೊಂಡಂತೆ ಆರ್ಥಿಕಾಭಿವೃದ್ಧಿ.

(ಎಫ್) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ವಾಸಸ್ಥಳಗಳಿಗೆ ಸಂಪರ್ಕ, ಸಾಮಾಜಿಕ ಭದ್ರತೆ ಹಾಗೂ ಅವರ ಘನತೆಯೂ ಒಳಗೊಂಡಂತೆ ಎಲ್ಲಾ ಅವಶ್ಯಕ ಸೌಕರ್ಯಗಳು;

(ಜಿ) ಅಭಿವೃದ್ಧಿಯಲ್ಲಿನ ಅಂತರವನ್ನು ಪರಿಣಾಮಕಾರಿಯಾಗಿ ತಗ್ಗಿಸುವಂಥ ಯಾವುದೇ ಇತರ ಕ್ರಮಗಳು.

(ಹೆಚ್) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಹೆಚ್ಚಾಗಿರುವಂಥ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿಯಲ್ಲಿ ಸಮಾನತೆ ತರುವ ಸಲುವಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದ ಮಹಿಳೆಯರಿಗೆ, ವಿಕಲಚೇತನರಿಗೆ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಲ್ಲಿನ ಅತ್ಯಂತ ಹಿಂದುಳಿದ ಉಪ ಗುಂಪುಗಳಿಗೆ ಯುಕ್ತ ಪಾಲನ್ನು ನೀಡುವುದು.

(3) ಅನುಸೂಚಿತ ಜಾತಿಗಳ ಉಪ-ಹಂಚಿಕೆ/ ಬುಡಕಟ್ಟು ಉಪ-ಹಂಚಿಕೆ ಮೇರೆಗೆ ಫಲಾನುಭವಿಗಳನ್ನು ಗುರುತಿಸುವುದು

ಪ್ರಯೋಜನಗಳನ್ನು ಪಡೆದುಕೊಳ್ಳಲು ಪದೇಪದೇ ಅರ್ಜಿ ಸಲ್ಲಿಸುವ ಅರ್ಜಿದಾರರ ಹೊರೆಯನ್ನು ಕಡಿಮೆ ಮಾಡಲು; ಮತ್ತು ಅರ್ಹ ಫಲಾನುಭವಿಗಳನ್ನು ಸೂಕ್ತವಾಗಿ ಗುರುತಿಸುವ ಸಲುವಾಗಿ ಅನುಸೂಚಿತ ಜಾತಿಗಳ ಉಪ-ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ ಅಡಿಯಲ್ಲಿ ಅನುಷ್ಠಾನಗೊಳಿಸುವ ಇಲಾಖೆಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಒಂದು ಅಥವಾ ಹೆಚ್ಚು ವರ್ಷಗಳವರೆಗೆ ನಿರಂತರವಾಗಿ ಪ್ರಯೋಜನ ನೀಡುವಂಥ ಯೋಜನೆಗಳ ಅರ್ಹತಾ ಮಾನದಂಡಗಳಿಗನುಸಾರ ಪಾರದರ್ಶಕವಾಗಿ ಫಲಾನುಭವಿಗಳನ್ನು ಗುರುತಿಸಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು:

**ಫಲಾನುಭವಿಗಳನ್ನು ಗುರುತಿಸುವಾಗ ತೆಗೆದುಕೊಳ್ಳಬೇಕಾದ ನಿರ್ದಿಷ್ಟ ಕ್ರಮಗಳು:**

(i) ಪ್ರತಿಯೊಂದು ಇಲಾಖೆಯು ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು;

(ii) ಅರ್ಜಿದಾರರ ಅರ್ಹತೆಯನ್ನು ಪರಿಶೀಲಿಸಿ, ಅರ್ಜಿದಾರರ ಮತ್ತು ಸಾರ್ವಜನಿಕರ ಮಾಹಿತಿಗಾಗಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ನಿರ್ದಿಷ್ಟ ಗ್ರಾಮ ಪಂಚಾಯತ್ ಕಚೇರಿಯಲ್ಲಿ ಮತ್ತು ವಿಧಾನಸಭಾ ಕ್ಷೇತ್ರಾವಾರು ಕ್ರೋಢೀಕರಿಸಿದ ಪಟ್ಟಿಯನ್ನು ಸಹಾಯಕ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ಮತ್ತು ಸಂಬಂಧಪಟ್ಟ ಇಲಾಖೆಗಳಲ್ಲಿ ಪ್ರಕಟಿಸುವುದು.

(iii) ಅರ್ಹ ಫಲಾನುಭವಿಗಳ ಪಟ್ಟಿಯನ್ನು ಅಂತಿಮವಾಗಿ ಹಂತವಾರು ಆಯ್ಕೆ ಮಾಡಲು ಸಂಬಂಧಪಟ್ಟ ಆಯ್ಕೆ ಸಮಿತಿಯ ಮುಂದೆ ಸಲ್ಲಿಸಬೇಕು ಹಾಗೂ ಆಯ್ಕೆ ಮಾಡಿದ ತರುವಾಯ ಪಟ್ಟಿಯನ್ನು ಪ್ರಕಟಿಸಬೇಕು.

(iv) ಗುರುತಿಸಲಾದ ಅರ್ಹ ಫಲಾನುಭವಿಗಳ ಪಟ್ಟಿ ಪೂರ್ಣಗೊಂಡ ತರುವಾಯ, ತರುವಾಯದ ವರ್ಷಗಳಲ್ಲಿ, ಅವಶ್ಯವಿದ್ದಾಗಲೆಲ್ಲಾ ಅಂಥದೇ ಕ್ರಮದಲ್ಲಿ ಅರ್ಹ ಫಲಾನುಭವಿಗಳ ಹೊಸ ಪಟ್ಟಿಯನ್ನು ತಯಾರಿಸಬೇಕು.

**10. 16ನೇ ಪ್ರಕರಣದ ಮೇರೆಗೆ ಸಾಮಾನ್ಯ ಯೋಜನೆಗಳ ವ್ಯಾಪ್ತಿಯಲ್ಲಿ ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳನ್ನು ತರಲು ಹೊಣೆಗಾರಿಕೆ:**

ಇಲಾಖೆಗಳು, ಅನುಸೂಚಿತ ಜಾತಿ ಉಪ-ಹಂಚಿಕೆ ಹಾಗೂ ಬುಡಕಟ್ಟು ಉಪ ಹಂಚಿಕೆಗಳ ಮೇರೆಗೆ ನಿರ್ದಿಷ್ಟ ಯೋಜನೆಗಳ ಜೊತೆಗೆ ಅನುಷ್ಠಾನಗೊಳಿಸುತ್ತಿರುವ, ಮುಂದುವರೆದ ಹಾಗೂ ಹೊಸ ಯೋಜನೆಗಳ ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಫಲಾನುಭವಿಗಳನ್ನು ಸಹ ಒಳಗೊಂಡಿರತಕ್ಕದ್ದು.

**11. ನೋಡಲ್ ಏಜೆನ್ಸಿಯು ಮೌಲ್ಯಮಾಪನ ಮಾಡುವುದಕ್ಕಾಗಿ ಅನುಸೂಚಿತ ಜಾತಿಗಳ ಉಪ-ಹಂಚಿಕೆ/ಬುಡಕಟ್ಟು ಉಪ-ಹಂಚಿಕೆಯ ಅಡಿಯಲ್ಲಿ ಆಯವ್ಯಯ ಪ್ರಸ್ತಾಪಗಳನ್ನು ಸಿದ್ಧಪಡಿಸುವುದು ಹಾಗೂ ಸಲ್ಲಿಸುವುದು.**

(1) ಯೋಜನೆಗಳ ಆಯವ್ಯಯ ಪ್ರಸ್ತಾಪಗಳನ್ನು ಸಿದ್ಧಪಡಿಸುವಾಗ, ನೋಡಲ್ ಇಲಾಖೆ ಮತ್ತು ಇತರ ಇಲಾಖೆಗಳ ಮುಂದೆ ಹೇಳಿದ ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.

(i) ನೋಡಲ್ ಇಲಾಖೆಯು, (ಎ) ಆಯವ್ಯಯದ ಪ್ರಸ್ತಾಪಗಳನ್ನು ಅಂತಿಮಗೊಳಿಸುವ ಮುಂಚೆ, ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳಿಗೆ ಸೇರಿರುವ, ವಿವಿಧ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ಮಾಡುವುದು